ಊರುಗಳು ಸುಟ್ಟು ಹೋದವು. ಆ ಗಲಭೆಯಲ್ಲಿ ಸಿಲುಕಿ ಒಬ್ಬಳು ವಿವಾಹಿತ ಸ್ತ್ರೀಯ ಮಾನಭಂಗವಾಯಿತು. ನಾನವಳನ್ನು ಹೇಗೋ ಇನ್ನಷ್ಟು ಮಂದಿಯಿಂದ ಬಚಾವು ಮಾಡಿ ಗಂಡನಲ್ಲಿಗೆ ಕರಕೊಂಡು ಹೋದೆ. ಆ ನರಸತ್ತ ಹೇಡಿ ಅವಳನ್ನು ತಿರಸ್ಕರಿಸಿ ನೀನೇ ಇಟ್ಟುಕೋ ಎಂದುಬಿಟ್ಟ. ಅವಳು ತಾಳಿ ಕಿತ್ತೆಸೆದು ಆ ಪಾಖಂಡಿಯ ಮುಖಕ್ಕೆಸೆದು ಓಡಿ ಹೋದಳು."

"ಓಡಿ ಹೋದಳೇ? ಎಲ್ಲಿಗೆಂದು ಗೊತ್ತಾಯಿತೇ?"

"ಕತೆ ಮುಗಿದಿಲ್ಲ ಮಿ?"

"ಮಿಸ್ಟರ್ ಸದಾಶಿವ ರಾವ್."

"ಸರಿ. ಆ ಕತ್ತಲಲ್ಲಿ ಸುಟ್ಟು ಉರಿಯುತ್ತಿದ್ದ ಊರಲ್ಲಿ ಅವಳನ್ನು ಎಲ್ಲೆಂದು ಹುಡುಕುವುದು? ನಾನು ಬಂದು ಬಿಡಾರದಲ್ಲಿ ಮಲಗಿಕೊಂಡೆ. ಏನು ಮಾಡಿದರೂ ನಿದ್ದೆ ಬರಲಿಲ್ಲ. ಮಧ್ಯರಾತ್ರಿ ಕಳೆದಿರಬಹುದು. ಹೊಳೆಯಿಂದ ದುಡುಂ ಎಂಬ ಶಬ್ದ ಕೇಳಿಸಿತು. ನಾನು ಓಡಿ ಹೋಗಿ ಹೊಳೆಗೆ ಧುಮುಕಿ ಎಳೆದು ತಂದದ್ದು ಅವಳನ್ನೇ. ಅವಳು ನನ್ನ ಕಾಲು ಹಿಡಕೊಂಡು – ನನ್ನನ್ನು ಬದುಕಿಸಿದವರು ನನಗೊಂದು ಬದುಕು ಕೊಡಿ – ಎಂದು ಕಣ್ಣೀರು ಹಾಕಿದಳು. ಅವಳನ್ನು ರಾತ್ರೋ ರಾತ್ರಿ ಕಾಸರಗೋಡಿಗೆ ಕರೆದೊಯ್ದು ನನ್ನ ತಂಗಿ ಮನೆಯಲ್ಲಿ ಬಿಟ್ಟು ಬಂದೆ. ಅವಳು ಊರಿನಿಂದ ಓಡಿ ಹೋಗಿದ್ದಾಳೆ ಎಂದೇ ಎಲ್ಲರೂ ಭಾವಿಸಿದರು. ಸೇತುವೆ ಕೆಲಸ ಮುಗಿದು, ಸನ್ಮಾನ ಮಾಡಿಸಿಕೊಂಡು ಊರು ಬಿಟ್ಟ ಮೇಲೆ ಅವಳನ್ನು ಸರಳವಾಗಿ ಮದುವೆಯಾದೆ. ಇವಳು ಈ ದಿಲ್‌ಷಾದ್ ನಮ್ಮಿಬ್ಬರ ಪ್ರೇಮದ ಫಲ."

"ನಾನು ಹುಡುಕುತ್ತಾ ಬಂದದ್ದು ಅವಳನ್ನೇ."

"ಅವರೇ ನಿಮ್ಮ ದೂರದ ಸಂಬಂಧಿಕರು ಎಂದಾದರೆ ಬನ್ನಿ ಮನೆಗೆ ಹೋಗೋಣ. ಮಾತಾಡಿಸಿಯೇ ಹೋಗೀರಂತೆ."

"ಅವಳು ಹೇಗಿದ್ದಾಳೆ?"

"ನಾನು ಅವಳನ್ನು ನಮ್ಮ ಮತಕ್ಕೆ ಸೇರಿಸಲಿಲ್ಲ. ಅವಳ ಕೋಣೆಯಲ್ಲಿ ಅವಳಿಷ್ಟದ ಮೂರ್ತಿಗಳನ್ನು, ಫೋಟೊಗಳನ್ನು ಇಟ್ಟುಕೊಂಡಿದ್ದಾಳೆ. ನಿಮ್ಮವರ ಎಲ್ಲಾ ಹಬ್ಬಗಳನ್ನೂ, ಪೂಜೆಗಳನ್ನೂ ಮಾಡುತ್ತಾಳೆ. ದಿಲ್‌ಷಾದ್ ಹುಟ್ಟಿದ ಮೇಲೆ ತುಂಬಾ ಸಂತೋಷವಾಗಿದ್ದಾಳೆ. ಹೇಗೂ ಇಲ್ಲಿಯವರೆಗೆ ಬಂದಿದ್ದೀರಿ. ನೋಡಿ ಮಾತಾಡಿಸಿಯೇ ಹೋಗಿ."

"ಇಲ್ಲ. ಬೇಡ."

"ಯಾಕೆ ಬೇಡ?"

"ಆಗ ನೀವು ಹೇಳಿದ ನರಸತ್ತ ಹೇಡಿ, ಪಾಖಂಡಿ ನಾನೇ!"


**ಪ್ರಭಾಕರ ಶಿಶಿಲ**

ಸುಳ್ಯದ ನೆಹರೂ ಮೆಮೋರಿಯಲ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ. ಇದುವರೆಗೆ 42 ಸಾಹಿತ್ಯ ಕೃತಿಗಳನ್ನು ಬರೆದಿದ್ದಾರೆ. ಮಹಾಭಾರತವನ್ನು ಆಧಾರಿಸಿ ಇವರು ರಚಿಸಿದ 'ಪುಂಸ್ತ್ರೀ' 12 ಭಾಷೆಗಳಿಗೆ ಅನುವಾದಗೊಳ್ಳುತ್ತಿದೆ. ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ಶಿಶಿಲರು ರಚಿಸಿರುವ 160 ಕೃತಿಗಳು ಭಾರತದ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಅವಲೋಕನ ಕೃತಿಗಳಾಗಿವೆ.